

ತುಳುನಾಡಿನ ದೈವಾರಾಧನೆ

# ಡೆನ್ನ ಡೆನ್ನ ಡೆನ್ನಾನ

## ಇದು ಸಿರಿ ಸೊಬಗಿನ ಪಾಡ್ದನ

**ದಕ್ಷಿಣ ಕನ್ನಡದ ಭಾಷೆ ಅಂದ್ರೆ ಘಟ್ಟದ ಮೇಲಿನವ್ರಿಗೆ ತಮಾಷೆ. ಪುಸ್ತಕದಲ್ಲಿದ್ದ ಹಾಗೆ ಮಾತಾಡ್ತೀರಿ ಅಂತ ಕಮೆಂಟು ಬೇರೆ. ಆದ್ರೆ ದಕ್ಷಿಣ ಕನ್ನಡ ತುಳುನಾಡು. ಇಲ್ಲಿನ ಭಾಷೆ, ನುಡಿ, ಊಟ, ಆಟ, ಕಲೆ ಎಲ್ಲವೂ ಮೈನವಿರೇಳಿಸುವಂಥದ್ದು. ಇಲ್ಲಿನ ಜನ ಎಲ್ಲೇ ಸಿಗಲಿ, 'ತುಳುವರೆಂಕುಲು' (ತುಳು ಭಾಷಿಗರು ನಾವು) ಎಂಬುದನ್ನು ಮರೆಯುವುದಿಲ್ಲ!**

■ **ಉಮಾ ಅನಂತ್**

ಹಾಯ್, ಎಂತದಾ ಇವತ್ತು ಹೊಸ ಅಂಗಿ ಹಾಕಿಕೊಂಡು ರೈಸ್ತಾ (ಮೆರೆಯುವುದು) ಇದ್ದಿಯಾ, ಏನಾದ್ರು ವಿಶೇಷ ಉಂಟಾ ಹೇಗೆ? ಗೆಳತಿ ಸವಿತಾ ಕೇಳಿದ್ಲು. ಏನಿಲ್ವಾ, ಇವತ್ತು ನನ್ನ ತಮ್ಮನ ಬರ್ತಡೆ, ಹಾಗಾಗಿ ಹೊಸ ಅಂಗಿ ಹಾಕಿದೆ ಅಷ್ಟೆ. ಚಿಕ್ಕವಳಿರುವಾಗ ಶಾಲೆಗೆ ಒಮ್ಮೆ ಹೊಸ ಅಂಗಿ ಹಾಕಿಕೊಂಡು ಹೋಗಿದ್ದಾಗ ಗೆಳತಿ ಹೇಳಿದ್ದ ಮಾತು ನಂಗೆ ಈಗ ನೆನ್ಪಾಯ್ತು. ಚಿಕ್ಕವಳಿದ್ದಾಗ ಶಾಲೆಗೆ ಹೊಸ ಅಂಗಿ ಹಾಕಿಕೊಂಡು ಹೋಗೋದೇ ಹಬ್ಬದ ಹಾಗೆ ಆಗ್ತಿತ್ತು. ಯಾಕೆ ಅಂತ ಗೊತ್ತುಂಟಾ? ವರ್ಷಕ್ಕೆ ಮೂರೇ ಅಂಗಿಯಲ್ಲಿ ನಾನು ಶಾಲೆಗೆ ಹೋದದ್ದು. ಆರು ಮಕ್ಕಳ ತಂದೆ ನಮ್ಮಪ್ಪ ಮೂರು ಅಂಗಿ ಹೊಲಿಸಿಕೊಟ್ಟದ್ದೇ ಹೆಚ್ಚು.

ಮೊನ್ನೆ ಬಾಲ್ಯದ ಗೆಳತಿ ಸವಿತಾ ಸಿಕ್ಕಿದ್ಲು. ಅವಳತ್ರ ಸಾ ಇದೇ ಮಾತು. ಆ ಕಾಲದ ಅಂಗಿ, ಶಾಲೆ, ಬುತ್ತಿ ಊಟ, ಹೊಳೆಯಲ್ಲಿ ಕೈತೊಳೆದದ್ದು, ಮೈದಾನದಲ್ಲಿ ಓಡಿದ್ದು, ರಾತ್ರಿಯಿಡೀ ಕೂತು ಆಟ (ಯಕ್ಷಗಾನ) ನೋಡಿದ್ದು, ಜಾತ್ರೆಯಲ್ಲಿ ಚರ್ಮುರಿ, ಗೋಳಿಬಜೆ ತಿಂದದ್ದು, ಬೇರೆಯವರ ಮನೆ ಕಾಂಪೌಂಡ್ ಒಳಗೆ ಅರಳಿದ ಹೂಗಳನ್ನು ಕದ್ದದ್ದು, ಸಿಕ್ಕಿ ಬಿದ್ದದ್ದು... ಒಂದಾ ಎರಡಾ..! ಹೈಸ್ಕೂಲ್ ಕಳೆದ ನಂತ್ರ ನಾವು ಬೇರೆ ಆದದ್ದು... ಆಮೇಲೆ ನಮ್ಮ ಜೀವನ ಸಾಗಿ ಬಂದದ್ದು, ಮದುವೆ ಆದದ್ದು, ಮಕ್ಕಳಾದದ್ದು, ಈಗ ಮಕ್ಕಳು ಶಾಲೆಗೆ ಹೋಗುದು, ಬೇಕ್ ಬೇಕಾದ ಅಂಗಿ ತೆಕ್ಕೊಂಡು ಹಾಕಿಕೊಂಡು ರೈಸುದು... ಎಲ್ಲ ಮಾತಾಡಿದೆವು. ಆ ಕಾಲ ಎಷ್ಟು ಚಂದ ಅಲ್ವಾ? ಹೀಗೆ ಅವಳತ್ರ ಮಾತಾಡ್ತ ನಮ್ಮ ಮಾತು ದಕ್ಷಿಣ ಕನ್ನಡದ ಭಾಷೆ ಬದಿಗೆ ತಿರುಗ್ತು. ಮೊದ್ಲೇ ಅವ್ಳು ಭಾಷಣ ಮಾಡೂದ್ರಲ್ಲಿ ಭಾರೀ ಉಶಾರಿ (ಜಾಣೆ). ಶಾಲೆಯಲ್ಲಿ ಭಾಷಣ ಸ್ಪರ್ಧೆ, ಆಶುಭಾಷಣ ಸ್ಪರ್ಧೆ ಎಲ್ಲದರಲ್ಲಿ ಸಾ ಅವ್ಳಿಗೇ ಪ್ರೈಜ್ ಬರ್ತಾ ಇದ್ದದ್ದು. ಈಗ್ಲೂ ಅದನ್ನೇ ನೆನಪಿಸಿಕೊಂಡು ಭಾಷೆ ಬಗ್ಗೆ ಭಾಷಣ ಬಿಗಿಲಿಕ್ಕೆ ಶುರು ಮಾಡಿದ್ಲು. 'ಭಾಷೆ ಸಮನ್ವಯತೆ ಬೆಳೆಸ್ತದೆ, ಸೌಹಾರ್ದ ಕಾಪಾಡ್ತದೆ, ಭಾವನೆಗಳನ್ನು ಬೆಸೀತದೆ, ಸಹಾಯ ನೀಡ್ತದೆ, ಸಂಬಂಧ ವೃದ್ಧಿಸ್ತದೆ, ಅನುಬಂಧ ಮೂಡಿಸ್ತದೆ, ಕನ್ನಡ ನಾಡಿನಲ್ಲಿ ಜನ ಒಂದಾಗುವುದೇ ತಾವು ಆಡುವ ಭಾಷೆಯಿಂದ' ಅಲ್ವಾ ಅಂದ್ಲು.